ಬಿದ್ದು ಜನರು ಸತ್ತು ಹೋಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಟ್ಟಿಕೊಡುವ ಮನೆಗಳು ಜನರ ಪ್ರಾಣ ತೆಗೆಯುವ ಮನೆಗಳಾಗಬಾರದು. ಅವರ ಮುಂದಿನ ಭವಿಷ್ಯಕ್ಕೆ, ಅವರ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅವುಗಳು **'ಕಲ್ಯಾಣ ಮನೆ'**ಗಳಾಗಬೇಕೇ ಹೊರತು ಸಾವಿನ ಮನೆಗಳಾಗಬಾರದು. ಅವುಗಳೇನಾದರೂ ಸಾವಿನ ಮನೆಗಳಾದಲ್ಲಿ, ಸರ್ಕಾರ ಮತ್ತು ನಾವುಗಳೆಲ್ಲರೂ ಹೊಣೆಗಾರರಾಗಬೇಕಾಗುತ್ತದೆ. ಆ ಪಾಪದ ಹೊರೆ ನಮ್ಮ, ನಿಮ್ಮ ಮತ್ತು ಮುಖ್ಯಮಂತ್ರಿಗಳ ತಲೆ ಮೇಲೆ ಬೀಳುತ್ತದೆ. ಜ್ಞಾಪಕವಿರಲಿ, ನಮಸ್ಕಾರ.

ಶ್ರೀ ವಿ.ಸೋಮಣ್ಣ:– ಒಂದು ಮನೆಯ ನಿರ್ಮಾನಕ್ಕೆ 2,80,000 ರೂ.ಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಈ ಮನೆಯ ಅಳತೆ 3.15 ಚದರ ಅಡಿಗಳಷ್ಟು ಬರುತ್ತದೆ. ಮನೆಗಳ ನಿರ್ಮಾಣದಲ್ಲಿ ಯಾವುದೇ ರೀತಿ ಕಳಪೆ ಕಾಮಗಾರಿಗಳಾಗಿದ್ದಲ್ಲಿ, ಮಾನ್ಯ ಹಿರಿಯ ಸದಸ್ಯರು ನನಗೆ ಯಾವಾಗ ದಿನಾಂಕ ನಿಗದಿಪಡಿಸಿಕೊಡುತ್ತಾರೋ, ಆ ದಿನಾಂಕದಂದು ನಾನು ಅವರ ಜೊತೆ ಹೋಗಿ ಯಾವುದೇ ಮುಲಾಜಿಗೆ ಒಳಗಾಗದೆ ಮನೆಗಳ ನಿರ್ಮಾಣದಲ್ಲಿ ಒಂದು ಸಣ್ಣ ಅಪಚಾರವಾಗಿದ್ದರೂ ಕಾನೂನು ಕ್ರಮ ಕೈಗೊಳ್ಳಲು ಹಿಂದೆ–ಮುಂದೆ ನೋಡುವುದಿಲ್ಲ. ಇತ್ತೀಚೆಗೆ ನಾವು ಕಟ್ಟುತ್ತಿರುವ ಮನೆಗಳ ಗುಣಮಟ್ಟದ ವಿಚಾರವಾಗಿ ಹೇಳುವುದಾದರೆ, ಇದಕ್ಕೆ ತಂತ್ರಜ್ಞರ ಸಮಿತಿಯೂ ಇದೆ. ಸನ್ಮಾನ್ಯ ಹಿರಿಯ ಮಾನ್ಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರು ಹೇಳುವಂತೆ, ಮನೆಗಳ ನಿರ್ಮಾಣದಲ್ಲಿ ಕಳಪೆ ಕಾಮಗಾರಿಗಳಾಗಿದ್ದಲ್ಲಿ, ಅವರು ಯಾವತ್ತೂ ನನಗೆ ದಿನಾಂಕ ನಿಗದಿಪಡಿಸಿಕೊಡುತ್ತಾರೋ, ಅವರ ಜೊತೆ ನಾನೇ ಸ್ವತಹ ಹೋಗುತ್ತೇನೆ. ಇಬ್ಬರು ಪರಿಶೀಲನೆ ಮಾಡೋಣ. ಒಂದು ಸಣ್ಣ ಲೋಪವಿದ್ದರೂ ಸರಿಪಡಿಸುವ ಕೆಲಸ ಮಾಡುತ್ತೇನೆ.

ಅಧ್ಯಕ್ಷರು:– ಶ್ರೀ ಬಿ.ಸಿ.ಪಾಟೀಲ್ ಇವರ ಪ್ರಶ್ನೆಯು ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ.

ಸಮಗ್ರ ಅಭಿವೃದ್ಧಿ ಯೋಜನೆಯಡಿ ನಿವೇಶನಗಳ ಮಾರಾಟ

19 (173) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ):– ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕೇಂದ್ರ ಸರ್ಕಾರದ ಸಹಾಯದೊಂದಿಗೆ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ ನಿವೇಶನಗಳನ್ನು ನಿರ್ಮಿಸಲಾಗಿದೆಯ;

ಆ) ಹಾಗಿದ್ದಲ್ಲಿ, ಒಟ್ಟು ನಿರ್ಮಿಸಲಾದ ನಿವೇಶನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಈಗಾಗಲೇ ಹಂಚಿಕೆಯಾದ ನಿವೇಶನಗಳು ಎಷ್ಟು;

ಇ) ಉಳಿದ ನಿವೇಶನಗಳೂ ಬೇರೆ ಬೇರೆ ಮಾದರಿಗೆ ಸೇರಿದವುಗಳಾಗಿದ್ದು ಅವುಗಳನ್ನು ಮಾರಾಟ ಮಾಡಲು ನಗರಸಭೆಗೆ ಅನುಮತಿ ನೀಡಲಾಗುವುದೆ?

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಳಿ):–

ಅ)ಹೌದು.

ಆ)ಈ ಯೋಜನೆಯಡಿಯಲ್ಲಿ ನಿವೇಶನ ಮತ್ತು ಸೇವೆಗಳು ಎಂಬ ಘಟಕದಡಿ ರಾಜ್ಯದಲ್ಲಿ ಒಟ್ಟು 6,500 ನಿವೇಶನಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಈವರೆಗೂ 5322 ನಿವೇಶನಗಳನ್ನು ನಿಯಮಾನುಸಾರ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಇ)ಉಳಿಕೆ 1178 ನಿವೇಶನಗಳು ಹಂಚಿಕೆ ಮಾಡುವುದು ಬಾಕಿ ಉಳಿದಿರುತ್ತದೆ. ಈ ನಿವೇಶನಗಳನ್ನು ಈ ಯೋಜನೆಯಡಿಯ ಮಾರ್ಗಸೂಚಯನ್ವಯ ಹಂಚಿಕೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳಿಗೆ ಕೇಳಿರುವ ಪ್ರಶ್ನೆಯು ರಾಜ್ಯಕ್ಕೆ ಸಂಬಂಧಿಸಿದ್ದರೂ ಜಮಖಂಡಿ ನಗರದಲ್ಲಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯಡಿ ಮಂಜೂರಾದ ಒಟ್ಟು ನಿವೇಶನಗಳೆಷ್ಟು? ಈಗಾಗಲೇ ಹಂಚಿಕೆಯಾಗಿರುವುದು ಎಷ್ಟು? ಮತ್ತು ಉಳಿದಿರುವುದೆಷ್ಟು ಎಂದು ಕೇಳಬಯಸುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್(ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಇಡೀ ರಾಜ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಪ್ರಶ್ನೆ ಕೇಳಿದ್ದಾರೆಂಬ ಭಾವನೆ ಬರುತ್ತದೆ. ವಿಶೇಷವಾಗಿ ಜಮಖಂಡಿ ಪಟ್ಟಣದ ಐ.ಡಿ.ಎಸ್.ಎಂ.ಟಿ. ಲೇಜೌಟ್ ಬಗ್ಗೆ ತಾವು ಕೇಳುತ್ತಿದ್ದೀರಿ. ಜಮಖಂಡಿಯಲ್ಲಿ ಸದರಿ ಯೋಜನೆಯಡಿ 1982–84ರಲ್ಲಿ ಸರ್ಕಾರಿ ಆದೇಶವೊಂದನ್ನು ಹೊರಡಿಸಿ 20 ಎಕರೆಗಳಷ್ಟು ಭೂಮಿಯನ್ನು ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಬೇಕೆಂಬ

ನಿರ್ಧಾರ ಕೈಗೊಳ್ಳಲಾಯಿತು. 1990ನೇ ಇಸವಿಯಲ್ಲಿ ಈ ಯೋಜನೆ ಕ್ಲಿಯರ್ ಆಗಿ ಒಟ್ಟು 668 ನಿವೇಶನಗಳನ್ನು ಅಲ್ಲಿ ನಿರ್ಮಿಸಲಾಗಿದೆ. ಈ ಪೈಕಿ 319 ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲಾಗಿದೆ. ಉಳಿದಿರುವ 349 ನಿವೇಶನಗಳ ಕುರಿತಂತೆ ಅಲ್ಲಿನ ಮೂಲ ಜಮೀನಿನ ಮಾಲೀಕರು ತಕರಾರು ಸಲ್ಲಿಸಿದ್ದರು. ಅದಕ್ಕೋಸ್ಕರ, 2006ರಲ್ಲಿ ಪರಿಷ್ಕೃತ ಯೋಜನೆ ತಯಾರಿಸಲಾಯಿತು. ಈ ನಿವೇಶನಗಳಿಗೆ ಯಾವ ದರ ನಿಗದಿಪಡಿಸಬೇಕು ಮತ್ತು ಯಾವ ರೀತಿ ಹಂಚಬೇಕೆಂದು 2008ನೇ ಇಸವಿಯಿಂದ ತಮ್ಮ ಜಿಲ್ಲಾಧಿಕಾರಿಗಳ ಹತ್ತಿರ ಈ ವಿಚಾರ ಬಾಕಿ ಇದೆ. 349 ನಿವೇಶನಗಳ ಪೈಕಿ ಶೇಕಡಾ 50ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಒಳಗೊಂಡಂತೆ Low Income Group ಯೋಜನೆಯಲ್ಲಿ ಅನುಷ್ಠಾನ ಗೊಳಿಸಬೇಕೆಂದಿದ್ದೇವೆ. ತಾವೂ ಕೂಡ ಕೂಡಲೇ ಯಾವ ದರವನ್ನು ನಿಗದಿಪಡಿಸಬೇಕೆಂದು ಪ್ರಸ್ತಾವನೆ ಕಳುಹಿಸಿಕೊಟ್ಟಲ್ಲಿ, ಅದಕ್ಕೆ ಸರ್ಕಾರದ ಕಡೆಯಿಂದ ನಾವು ಅನುಮೋದನೆ ನೀಡುತ್ತೇವೆ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಮಾನ್ಯ ಮಂತ್ರಿಗಳು ಹೇಳಿದಂತೆ ಈ ನಿವೇಶನಗಳನ್ನು ಬಹಿರಂಗವಾಗಿ ಹರಾಜು ಮೂಲಕ ಹಂಚಿಕೆ ಮಾಡುವುದರಿಂದ ನಗರ ಸಭೆಗೆ ಉತ್ಪನ್ನ ಬರುತ್ತದೆ. ಜಮಖಂಡಿಯಲ್ಲಿ ರಸ್ತೆಗಳು ಹಾಳಾಗಿವೆ. ಮೂಲಭೂತಸೌಕರ್ಯಗಳಿಲ್ಲ. ಆರ್ಥಿಕವಾಗಿ ಅತ್ಯಂತ ಶೋಚನೀಯವಾಗಿರುವ ಜಮಖಂಡಿ ನಗರಸಭೆಗೆ ಆರ್ಥಿಕ ಶಕ್ತಿಯನ್ನು ತುಂಬಬೇಕೆಂದರೆ ಮಾನ್ಯ ಸಚಿವರು ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಆದೇಶ ನೀಡಿ ಕಾನೂನಿನ ಚೌಕಟ್ಟಿನಡಿ ಅಲ್ಲಿರುವ ನಿವೇಶನಗಳನ್ನು ಮಾರಾಟ ಮಾಡಿಸಿಕೊಟ್ಟರೆ ಸಾರ್ವಜನಿಕರಿಗೆ ವ್ಯವಸ್ಥೆ ಮಾಡಿಕೊಟ್ಟಂತೆ ಆಗುತ್ತದೆ, ಮತ್ತೊಂದು ಆ ನಗರ ಸಭೆಗೆ ಆರ್ಥಿಕವಾಗಿ ಶಕ್ತಿಯನ್ನು ತುಂಬಿದಂತಾಗುತ್ತದೆ. ಇದನ್ನು ಮಾನ್ಯ ಸಚಿವರು ಮಾಡಬಹುದೊ ಹೇಗೆ?

ಶ್ರೀ ಎಸ್.ಸುರೇಶ್‌ಕುಮಾರ್:– ನಿವೇಶನದ ದರಪಟ್ಟಿಯನ್ನು ತರಿಸಿ ಅದರ ಸ್ವರೂಪವನ್ನು ನೋಡಿ ಮಾಡಿಸಿಕೊಡುತ್ತೇನೆ.

ಬೆಳಗಾವಿಯ ಸಂಪೂರ್ಣ ಅಭಿವೃದ್ಧಿಯ ಪ್ರಸ್ತಾವನೆ

23 (54) ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಸನ್ 1924ರಲ್ಲಿ ಬೆಳಗಾವಿಯಲ್ಲಿ ನಡೆದ 39ನೇ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು